# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.**

**ಸಂಖ್ಯೆ: ಸ.ಅ/ವಾ-20/ಪಿ.ಆರ್/19/2021-22** **ದಿನಾಂಕ:18-09-2021**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 18-09-2021 ರಂದು ವಾರ್ಡ್ ನಂ:20 ಗಂಗಾನಗರ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಬಿ.ಎಸ್ ಪ್ರಹ್ಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ರಾಮರಾವ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 20 |
| 3. | ಶ್ರೀಮತಿ ಸುವರ್ಣದೇವಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4. | ಶ್ರೀ.ಗೋವಿಂದರಾಜು | ತೋಟಗಾರಿಕೆ ಇಲಾಖೆ |
| 5. | ಶ್ರೀ.ಕೆ.ಎನ್.ಮಂಜುನಾಥ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) |
| 6. | ಶ್ರೀ.ಎಂ.ಬಸವರಾಜ್ | ಬೆಸ್ಕಾಂ |
| 7. | ಶ್ರೀ. ವೆಂಕಟರಮಣ | ಮಾರ್ಷಲ್ |
| 8. | ಶ್ರೀ ಕುಮಾರ್ | ಎ.ಎಸ್.ಐ ಆರ್.ಟಿ ನಗರ ಪೋಲೀಸ್ ಠಾಣೆ |
| 9. | ಎಂ.ಆರ್ ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ ಶಾಲಿನಿ ದೇಶಪಾಂಡೆ | ಸಾರ್ವಜನಿಕರು |
| 11. | ಅಬ್ದುಲ್ ಮಾಜೀದ್ | ಸಾರ್ವಜನಿಕರು |
| 12. | ವಿಜಯ್ ವಿ ಗೌಡ | ಸಾರ್ವಜನಿಕರು |
| 13. | ಶ್ರೀ ಬಸವರಾಜ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ರಾಮರಾವ್ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಬಿ.ಎಸ್.ಪ್ರಹ್ಲಾದ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. ಹೆಚ್.ಎಂ.ಟಿ ಬಡಾವಣೆಯ 4ನೇ ಕ್ರಾಸ್‌ನಲ್ಲಿ ಒಳಚರಂಡಿಗೆ 6 ಇಂಚು ಪೈಪನ್ನು ತೆಗೆದು 9 ಇಂಚು (300 ಮೀ ಉದ್ದ) ಪೈಪನ್ನು ಅಳವಡಿಸಬೇಕೆಂದು ತಿಳಿಸಲಾಯಿತು.
2. ಹೆಚ್.ಎಂ.ಟಿ ಬಡಾವಣೆಯ 7ನೇ ಕ್ರಾಸ್‌ನಲ್ಲಿ ಮರದ ಕೊಂಬೆಗಳು ಸಾರ್ವಜನಿಕರಿಗೆ ತಾಗದ ಹಾಗೇ ಕತ್ತರಿಸಲು ಸೂಚಿಸಲಾಯಿತು.
3. ಹೆಚ್.ಎಂ.ಟಿ ಬಡಾವಣೆಯ 7ನೇ ಕ್ರಾಸ್‌ನ ಮನೆ ನಂ.106 ನ ಮನೆಯ ಮುಂದೆ ಸ್ಲಾಬ್ ಸರಿಪಡಿಸಬೇಕೆಂದು ಸೂಚಿಸಲಾಯಿತು.

4. ವಾರ್ಡ್‌ನಲ್ಲಿ ಮೂರು ತಿಂಗಳಿಂದ ವಿದ್ಯುತ್ ವ್ಯತ್ಯಯದ ಸಮಸ್ಯೆಯನ್ನು ಬೆಸ್ಕಾಂ ಅಧಿಕಾರಿಗಳಿಗೆ ಸಾರ್ವಜನಿಕರು ತಿಳಿಸಿದರು.
5. ದಿನ್ನೂರು ಪ್ರಗತಿ ಕೃಪೆ ಹತ್ತಿರ ಸ್ಯಾನಿಟರಿ ಮತ್ತು ವಾಟರ್ ನ ಸಮಸ್ಯೆಗಳನ್ನು ಒಂದು ವರ್ಷದಿಂದ ತೊಂದರೆಯಾಗಿದ್ದು, ಅದನ್ನು ಸರಿಪಡಿಸಿಕೊಡಿ ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸಾರ್ವಜನಿಕರು ತಿಳಿಯಪಡಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು
ವಾರ್ಡ್ ನಂ: 20, ಗಂಗಾನಗರ

ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20, ಗಂಗಾನಗರ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.